1112 ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ವಿಧಾನಸಭಾ ಕೇತ್ರದಲ್ಲಿನ ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರ ಮತ್ತು ವೈದ್ಯಕಿಯೇತರ ಸಿಬ್ಬಂದಿಗಳ ಕೊರತೆ ಎಷ್ಟಿದೆ (ಆಸ್ಪತ್ರೆಗಳವಾರು ವಿವರ ನೀಡುವುದು);

ಆ) ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ಪಶುಸಂಗೋಪನಾ ಆಸ್ಪತ್ರೆಯ ಕಟ್ಟಡಗಳು ಎಷ್ಟಿವೆ? ಅವುಗಳು ಸುಸ್ಥಿತಿಯಲ್ಲಿ ಇದೆಯೇ? ಇಲ್ಲದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಪಶುವೈದ್ಯ ಘಟಕಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಇದ್ದಲ್ಲಿ, ಅವುಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 7 ಜನ ಪಶುವೈದ್ಯರು ಮತ್ತು 58 ವೈದ್ಯಕೀಯೇತರ ಸಿಬ್ಬಂದಿಗಳ ಕೊರತೆ ಇರುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲಾಖೆಯಲ್ಲಿ 100 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದ್ದು ಇದರಲ್ಲಿ 68 ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ನಿವೃತ್ತ ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಬಾಕಿ 32 ಹುದ್ದೆಗಳಿಗೆ ಕೂಡ ಪಶುವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇತ್ತೀಚೆಗೆ ನೇರ ನೇಮಕಾತಿ ಮೂಲಕ ಆಯ್ಕೆಯಾದ 113 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ. ಆದಾಗ್ಯೂ ಇಲಾಖೆಯಲ್ಲಿ 975 ಹುದ್ದೆಗಳು ಖಾಲಿ ಉಳಿದಿದ್ದು ಈ ಪೈಕಿ 400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಸಹಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಖಾಲಿ ಇರುವ 55 ಪಶುವೈದ್ಯಕೀಯ ಮೇಲ್ವಿಚಾರಕರ ಹುದ್ದೆಗಳನ್ನು ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಬೇಕಾಗಿದ್ದು, ಮುಂಬಡ್ತಿ ಪ್ರಕ್ರಿಯೆ ಆರಂಭವಾಗಿರುತ್ತದೆ.

ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿದ್ದು, ಖಾಲಿ ಇರುವ 486 ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪಶುವೈದ್ಯಕೀಯ ಪರೀಕ್ಷಕರ 515 ಹುದ್ದೆಗಳು ಖಾಲಿ ಇದ್ದು, ಇವುಗಳನ್ನು 50% ನೇರ ನೇಮಕಾತಿ ಹಾಗೂ 50% ಮುಂಬಡ್ತಿ ಮೂಲಕ ತುಂಬಬೇಕಾಗಿದ್ದು, 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ನೇರ ನೇಮಕಾತಿಯ ಮೂಲಕ ತುಂಬುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಆಯೋಗ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದೆ ಹಾಗೂ ಇನ್ನುಳಿದ 215 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡುವ ಮೂಲಕ ತುಂಬಲಾಗುವುದು.

ಪಶುವೈದ್ಯಕೀಯ ಸಹಾಯಕರ 442 ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

2174 "ಡಿ" ದರ್ಜೆ ನೌಕರರ ಹುದ್ದೆಗಳು ಖಾಲಿ ಇದ್ದು ಈ ಪೈಕಿ 1400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಉಳಿದಂತೆ ಖಾಲಿ ಇರುವ ಹುದ್ದೆಗಳನ್ನು ಬಾಹ್ಯ ಮೂಲ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಗುತ್ತಿಗೆ ಆಧಾರದಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಅನುಕಂಪಾರ್ಥ ನೌಕರಿ ಹಾಗೂ ಸಂಖ್ಯಾತಿರಿಕ್ತ ನೌಕರರನ್ನು ಮರು ವಿನ್ಯಾಸಗೊಳಿಸುವ ಮೂಲಕ ಆದ್ಯತೆಯ ಮೇರೆಗೆ ಭರ್ತಿ ಮಾಡಲಾಗುತ್ತಿದೆ.

ಇ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 28 ಪಶುವೈದ್ಯಕೀಯ ಸಂಸ್ಥೆಗಳಿರುತ್ತದೆ. ಇವುಗಳಲ್ಲಿ 27 ಪಶುವೈದ್ಯಕೀಯ ಸಂಸ್ಥೆಗಳು ಸ್ವಂತ ಕಟ್ಟಡವನ್ನು ಹೊಂದಿದ್ದು ಸುಸ್ಥಿತಿಯಲ್ಲಿದೆ.

ಕೂಡುಮಲ್ಲಿಗೆಯ ಗ್ರಾಮದಲ್ಲಿನ ಪಶುಚಿಕಿತ್ಸಾಲಯವು ಗ್ರಾಮಪಂಚಾಯತಿಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹೊಸ ಕಟ್ಟಡ ನಿರ್ಮಿಸಲು ಆರ್.ಐ.ಡಿ.ಎಫ್. ಅಡಿಯಲ್ಲಿ ಪರಿಶೀಲಿಸಲಾಗುವುದು.

ಈ) ಇಲ್ಲ.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರ ಮತ್ತು ವೈದ್ಯಕೀಯೇತರ ಖಾಲಿ ಹುದ್ದೆಗಳ ವಿವರ

ಕ್ರ ಸಂ.	ಪಶುವೈದ್ಯ ಸಂಸ್ಥೆಗಳು	ಪಶುವೈದ್ಯಾಧಿಕಾರಿ	ಹಿರಿಯ ಪಶುವೈದ್ಯ ಪರೀಕ್ಷಕರು	ಪಶುವೈದ್ಯ ಪರೀಕ್ಷಕರು	ಪಶುವೈದ್ಯ ಸಹಾಯಕರು	"ಡಿ: ದರ್ಜೆ ನೌಕರರು	ಒಟ್ಟು
1	ಪಶು ಆಸ್ಪತ್ರೆ, ತೀರ್ಥಹಳ್ಳಿ	1	–	–	–	1	2
2	ಪಶುಚಿಕಿತ್ಸಾಲಯ, ಗುತ್ತಿಎಡೇಹಳ್ಳಿ	1	–	1	–	1	3
3	ಪಶುಚಿಕಿತ್ಸಾಲಯ, ಯೋಗೀಮಳಲಿ	1	1	–	–	1	3
4	ಪಶುಚಿಕಿತ್ಸಾಲಯ, ನಾಲೂರು	1	–	1	–	1	3
5	ಪಶುಚಿಕಿತ್ಸಾಲಯ, ಕುಡುಮಲ್ಲಿಗೆ	1	–	1	–	2	4
6	ಪಶುಚಿಕಿತ್ಸಾಲಯ, ಯಡೂರು	1	–	1	–	2	4
7	ಪಶುಚಿಕಿತ್ಸಾಲಯ, ರಾಮಚಂದ್ರಪುರ	1	–	1	–	2	4
8	ಪಶುಚಿಕಿತ್ಸಾಲಯ, ಸಾಲ್ಗಡಿ	–	1	–	–	2	3
9	ಪಶುಚಿಕಿತ್ಸಾಲಯ, ಮಂಡಗದ್ದ	–	–	1	–	2	3
10	ಪಶುಚಿಕಿತ್ಸಾಲಯ, ಕನ್ನಂಗಿ	–	–	1	–	1	2
11	ಪಶುಚಿಕಿತ್ಸಾಲಯ, ನಗರ	–	–	1	–	–	1
12	ಪಶುಚಿಕಿತ್ಸಾಲಯ, ಹುಂಚ	–	–	1	1	1	3
13	ಪಶುಚಿಕಿತ್ಸಾಲಯ, ಗಾಜನೂರು	–	–	1	–	–	1
14	ಪಶುಚಿಕಿತ್ಸಾಲಯ, ಅರೇಹಳ್ಳಿ	–	–	–	–	1	1
15	ಪಶುಚಿಕಿತ್ಸಾಲಯ, ಕೋಣಂದೂರು	–	–	–	–	1	1
16	ಪಶುಚಿಕಿತ್ಸಾಲಯ, ಆರಗ	–	–	–	–	1	1
17	ಪಶುಚಿಕಿತ್ಸಾಲಯ, ದೇವಂಗಿ	–	–	–	–	1	1
18	ಪಶುಚಿಕಿತ್ಸಾಲಯ, ಮೇಗರಹಳ್ಳಿ	–	–	–	–	1	1
19	ಪಶುಚಿಕಿತ್ಸಾಲಯ, ಸಾಲೂರು	–	–	1	–	2	3
20	ಪಶುಚಿಕಿತ್ಸಾಲಯ, ಆರಳಸುರಳಿ	–	–	–	1	1	2

21	ಪ್ರಾ.ಪ.ಚಿ, ಮಾಳೂರು ಗಬಡಿ	–	1	–	–	1	2
22	ಪ್ರಾ.ಪ.ಚಿ, ಸಂಜಿಕಟ್ಟಿ	–	1	–	–	1	2
23	ಪ್ರಾ.ಪ ಚಿ, ಕಾನಗೋಡು	–	1	–	–	–	1
24	ಪ್ರಾ.ಪ.ಚಿ, ಭಾನಿಕೈಸರು	–	–	1	1	–	2
25	ಪ್ರಾ.ಪ ಚಿ, ಬಸವಾನಿ	–	–	1	–	–	1
26	ಪ್ರಾ.ಪ.ಚಿ, ಕೆ.ಬಿ.ಸರ್ಕಲ್	–	–	–	–	1	1
27	ಪ್ರಾ.ಪ.ಚಿ, ಹಾರೋಗುಳಿಗೆ	–	–	–	1	–	1
28	ಪ್ರಾ.ಪ.ಚಿ, ಹೆಬ್ಬಗೆ	–	–	–	–	1	1
29	ಪ್ರಾ.ಪ.ಚಿ, ಹೆದ್ಮೂರು	–	–	–	–	1	1
30	ಪ್ರಾ.ಪ ಚಿ, ಹೂದ್ಲ	–	–	–	–	1	1
31	ಪ್ರಾ.ಪ.ಚಿ, ಮರೆಹಳ್ಳಿ ಬಿಸಿಲಮನೆ	–	–	–	–	1	1
32	ಕೃ.ಗ.ಕೇಂದ್ರ, ಸೂದೂರು	–	–	1	–	–	1
33	ಕೃ.ಗ.ಕೇಂದ್ರ, ಆಗುಂಬೆ	–	–	1	–	–	1
34	ಕೃ.ಗ.ಕೇಂದ್ರ, ಕಲ್ಮನೆ	–	–	1	–	–	1
35	ಕೃ.ಗ ಕೇಂದ್ರ, ಸೋನಲೆ	–	–	1	–	1	2
	ಒಟ್ಟು	7	5	17	4	32	65

561 ಡಾ: ಮಹದೇವಪ್ಪ ಹೆಚ್.ಪಿ. (ಟಿ. ನರಸೀಪುರ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ಒಂದು ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ ಹಾಗೂ ರಾಜ್ಯದಲ್ಲಿ ವರ್ಷಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ತಯಾರಿಸಲಾಗುತ್ತಿದೆ (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);

ಆ) ಪ್ರತಿ ಯೂನಿಟ್ ವಿದ್ಯುತ್ ತಯಾರು ಮಾಡಲು ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು (ಜಲ ಮೂಲಗಳಿಂದ ಮತ್ತು ಥರ್ಮಲ್ ಘಟಕಗಳಿಂದ ಪ್ರತ್ಯೇಕ ಮಾಹಿತಿ ಒದಗಿಸುವುದು);